ಜೆಆರ್‌ಎಫ್ ಫೆಲೋ ಆಗಿ ಪಿಎಚ್.ಡಿ ಪಡೆದಳು. 'ಅನುಭವ ಸವಿಯಲ್ಲ, ಅದರ ನೆನಪೇ ಸವಿಯು' ಎನ್ನುವಂತೆ ಕಾಲದ ಮರೆಸುವ ಶಕ್ತಿಯನ್ನು ಮೀರಿ ಎದ್ದು ನಿಲ್ಲುವುದು ಕಲಬುರ್ಗಿಯವರ ಗುರುತರ ಗುರುತನ, ವಿದ್ಯಾರ್ಥಿ ಪ್ರೀತಿಯ ಅಂತಃಕರಣ.

ಅದು 2001ರ ಮಾರ್ಚ್ 6 ಕಲಬುರ್ಗಿಯವರ ಕನ್ನಡ ವಿ.ವಿ. ಕುಲಪತಿ ಹುದ್ದೆಯ ಕೊನೆಯ ದಿನ. ಆ ಮುಂಜಾನೆ ಅವರಿಗೆ ಫೋನು ಮಾಡಿದೆವು, 'ಮನೆಗೆ ಬನ್ನಿ ಎಂದು'. 'ಸಂಜೆ ಬರೋಣು, ಧಾರವಾಡಕ್ಕ ಹೋಗುಮುಂದ ಚಾ ನಿಮ್ಮನಿಯಾಗ ಮತ್ತ' ಎಂದರು. ನುಡಿದಂತೆ ದಂಪತಿಗಳು ಒಡಬಂದರು. ಕಟ್ಟಿದ ವಿ.ವಿ ಯನ್ನು ಬಿಟ್ಟು ಹೊರಡುವಾಗ ಎಂದೂ ಕಾಣದ ನೋವಿನ ಸೆಳೆತ ಅವರನ್ನು ಇಡಿಯಾಗಿ ಆವರಿಸಿದ್ದನ್ನು ನಾವೂ ಅನುಭವಿಸಿದೆವು. ನಮ್ಮಲ್ಲಿಂದ ಹೊರಡುವಾಗ ಕುಲಪತಿಗಳ ವಾಹನ ಮನೆ ಮುಂದೆ ಕಾದಿತ್ತು. 'ಯಾಕಿನ್ನು ನಿಂತಿದ್ದಿ, ನಾನೀಗ ಕುಲಪತಿ ಅಲ್ಲ' ಎಂದು ಕುಲಪತಿ ವಾಹನವನ್ನು ನಯವಾಗಿ ನಿರಾಕರಿಸಿದರು. 'ನಮ್ಮ ಕಾರ್ ಬಳಸಿ ಸರ್' ಎಂದು ಕೇಳಿದೆವು. 'ಒಲ್ಲೆ ಬಸ್ ಐತಿ' ಎಂದು ಕೆಎಸ್‌ಆರ್‌ಟಿಸಿಯ ಕೆಂಪು ಬಸ್‌ನಲ್ಲಿ ವಿ.ವಿ. ಕ್ಯಾಂಪಸ್‌ನಿಂದ ಹೊರಟ ಚಿತ್ರ ನಮಗೆ ಇಂದೂ ಕಣ್ಣಿಗೆ ಕಟ್ಟಿ ನಿಂತಿದೆ. ಇಂತಹ ಅಗಲಿಕೆಯ ಕ್ಷಣಗಳೇ ನಿಜವಾಗಿ ನಾವು ಕಳೆದುಕೊಳ್ಳುವುದೇನನ್ನು ಎನ್ನುವುದಕ್ಕೆ ಸಾಕ್ಷಿಯಾಗುವುದು. ಕಲಬುರ್ಗಿಯವರಿಲ್ಲದ ಆವರಣದ ನಿರ್ವಾತ ಸ್ಥಿತಿ ಹೇಗಿತ್ತು ಎಂದರೆ ಮುಂದಿನ ನಾಲ್ಕಾರು ದಿನ ಆವರಣದಲ್ಲಿ ವಾಕಿಂಗ್‌ಗೆ ಕಾಲಿಡಲು ನಮಗೆ ಸಾಧ್ಯವಾಗಲಿಲ್ಲ. ಇಂದಿನ ಮುಖವಾಡದ ಜಗತ್ತಿನಲ್ಲಿ ಕಲಬುರ್ಗಿಯವರ ಅಂತರಂಗ ಬಹಿರಂಗ ಶುದ್ಧಿಗೆ ತಲೆಬಾಗಿ ಕೈ ಮುಗಿವೆ.

ಆ ಒಂದು ದಿನ ಬಂದ ಕಲಬುರ್ಗಿಯವರ ಫೋನು ಸ್ವೀಕರಿಸಿದಾಗ, 'ಕರ್ನಾಟಕ ಸರಕಾರ (ಕನ್ನಡ ಪುಸ್ತಕ ಪ್ರಾಧಿಕಾರ) ಹಳಗನ್ನಡ ಕಾವ್ಯಮಾಲೆ-ಹತ್ತು ಕೃತಿಗಳನ್ನು ಪ್ರಕಟಿಸುವ ಯೋಜನೆಗೆ ಆದೇಶ ನೀಡಿದೆ. ನಾ ಗೌರವ ಸಂಪಾದಕ ಇದೀನಿ. ಮುದ್ದಣನ 'ರಾಮಾಶ್ವಮೇಧ' ಕಾವ್ಯ ಸಂಪಾದನೆ ನಿನಗ ಹಚ್ಚಿನಿ. ಎರಡು ತಿಂಗಳ ಕಾಲ ಐತಿ. ಬ್ಯಾಗ ಮುಗ್ಸಿಕೊಡು' ಅಂದವರೇ ಫೋನ್ ಇಟ್ಟರು. ನನ್ನ ಉತ್ತರ ಒಪ್ಪಿಗೆ ಯಾವುದಕ್ಕೂ ಕಾಯದ ಪ್ರೀತಿಯ ರೀತಿಯದು ಕಲಬುರ್ಗಿಯವರ ಮಾರ್ಗ. ಮತ್ತೆ ಆಗಾಗ ಫೋನ್ ಮಾಡಿ, 'ಸಂಪಾದನಾ ಕೆಲಸ ಹೆಂಗ್ ಮಾಡ್ತಾ ಇದ್ದಿ, ಏನು ಎತ್ತ' ಎಂದು ನೆನಪಿಸುತ್ತಿದ್ದರು. ಆದರೂ ಕೊಟ್ಟ ಅವಧಿ ದಾಟಿ ದಿನ ಮುನ್ನಡೆದಾಗ ಅವರ ಸಾತ್ವಿಕ ಸಿಟ್ಟಿನ 'ಏರುದನಿಗೆ' ಕಸಿವಿಸಿಕೊಂಡಿದ್ದೆ. ಮರುಕ್ಷಣದಲ್ಲಿ, 'ಹುಡುಗರು ಹೆಂಗಿದಾರಾ ? ಪ್ರಜ್ಞಾನ ಮಗ ಏನು ಓದಾಕ ಹತ್ತಾನ?' ಎಂಬ ಕೌಟುಂಬಿಕ ಟಚ್ ಕೊಡುವ ಆಪ್ತತೆಯಲ್ಲಿ ನಾನು ಅಷ್ಟೇ ಬೇಗ ಕರಗುತ್ತಿದ್ದೆ. 'ರಾಮಾಶ್ವಮೇಧ' ಸಂಪುಟ ಸಿದ್ಧಮಾಡಿ ಒಪ್ಪಿಸಿದಾಗ 'ಲೇಖಕನಿಗೆ ಈ ಶ್ರದ್ಧೆ ಇರಬೇಕ. ಬಹಳ ಛಲೋ ಆಗ್ಯಾದ ನಿನ್ನ ಪ್ರಸ್ತಾವನೆ' ಎಂಬ ಅವರ ಶಭಾಸ್‌ಗಿರಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದು, ನನ್ನೊಳಗೊಂದು ಹೆಮ್ಮೆ ಮೂಡಿದ್ದು ಸತ್ಯ-ಇದು ಕಲಬುರ್ಗಿಯವರ ಕೊಡುಗೆ.

ಕಲಬುರ್ಗಿಯವರ ಫೋನ್ ಬಹಳ ಬಾರಿ ಬಂದದ್ದು ಕಾಯಕ ಸಂಬಂಧಿಯೇ. ಹಾಗೆ ಫೋನು ಬಂದಾಗ ನಾನು ನಾವಡರು ಅವರ ಅಭಿಮಾನದ ಕಾಳಜಿಯ ಕೋಪಕ್ಕೆ ಸಿದ್ಧರಾಗಿಯೇ ಕಿವಿ ಕೊಡುತ್ತಿದ್ದೆವು. 'ನಾವಡ ಯಾಕ ಭಾಷಣ ಅಂತ ಊರೂರು ಅಡ್ಡಾಡ್ಕೋತ ಇರ್ತಾನ. ಏನಾರು ದೊಡ್ಡ ಯೋಜನೆ ಹಾಕ್ಕೊಂಡು ಕುಂತು ಬರೀ ಅಂತೀನಿ. ಆಗ್ಲಿ ಸರ್ ಅಂತಾನ ಮತ್ತೆ ಭಾಷಣಕ್ಕೆ ಹೋಗ್ತಾನ. ನಾವಡ ಬಹಳ ಮೆತ್ತಗಿನ ಮನುಷ್ಯ, ದಾಕ್ಷಿಣ್ಯಕ್ಕೆ ಬೀಳ್ತಾನ. ನಾ ನಿನಗ ಯಾಕ ಫೋನ್ ಮಾಡೀನಿ ಅಂದ್ರ ನೀನಾರು ನಾವಡಗೆ ಹಾಗ ತಿರುಗಾಡಕ ಯಾಕ ಬಿಟ್ಟಿ? ಬರೆಯಾಕ ಹೇಳು ಅಂತ ಏನ ಹೇಳ್ತಿ ಅಲ್ಲ ನಾ ಹೇಳಿದ್ದ.' ಅಂತ ಫೋನು ಇಟ್ಟುಬಿಟ್ಟದ್ದರು. ಇದು ಕಲಬುರ್ಗಿಯವರ ಪುಸ್ತಕ ಪ್ರೀತಿಯ ರೀತಿ. ನಮ್ಮ ಮೇಲಿನ ಪ್ರೀತಿಯ ಹಕ್ಕು.

ಅವರ ಸ್ನೇಹದ ಇನ್ನೊಂದು ಮಗ್ಗುಲನ್ನೂ ನಾನಿಲ್ಲಿ ಹೇಳಲೇ ಬೇಕು. ಅವರು ಕುಲಪತಿ ಸ್ಥಾನದಿಂದ ನಿವೃತ್ತರಾದ ಬಳಿಕವೂ ನಮ್ಮ ಎರಡು ಕುಟುಂಬಗಳ ಸ್ನೇಹದ ಗಾಢತೆ ಹಾಗೆಯೇ ಬೆಳೆಯಿತು. ನಮ್ಮ ಮಗಳ ಮದುವೆಗೆ ಧಾರವಾಡದಿಂದ ದೂರದ ಕುಂದಾಪುರಕ್ಕೆ ಕಲಬುರ್ಗಿ ದಂಪತಿಗಳು ಬಂದದ್ದು, ನಮ್ಮೊಂದಿಗೆ ಇದ್ದದ್ದು ನಮಗೆ ಮರೆಯದ ಸಂಭ್ರಮ; ಪ್ರೀತಿಯ ವ್ಯಾಖ್ಯಾನ. ನಾವು ಕೃತಜ್ಞತೆಯ ನುಡಿ ಆಡಿದಾಗ ಕಲಬುರ್ಗಿಯವರು, 'ಪ್ರಜ್ಞಾ ನಮ್ ಹುಡುಗಿ ಅಲ್ಲೇನು ನಾವು ಬರಬೇಕ ಬಂದೀವಿ' ಉಮಕ್ಕನೂ ಅದಕ್ಕೆ